

## ಮಲ್ಲಿಗೆ, ಸೇವಂತಿಗೆ, ಆನೆ, ನವಿಲು ವಿನ್ಯಾಸ!

ಖಣದ ಸೀರೆ ಬೇರೆಲ್ಲ ಸೀರೆಗಳಿಗಿಂತ ಬಹಳ ಭಿನ್ನ. ಈ ಸೀರೆಗಳಲ್ಲಿ ಬಳಸುವ ಜನಪ್ರಿಯ ವಿನ್ಯಾಸಗಳೆಂದರೆ ಚೆಂಡು ಹೂವು, ತೇರು, ರುದ್ರಾಕ್ಷಿ, ಆನೆ ಹೆಜ್ಜೆ, ಸೂಜಿ ಮಲ್ಲಿಗೆ, ಸೂರ್ಯ ಕಮಲ, ಸೂರ್ಯ ಮುಕುಟ, ನಯಾಪೈಸೆ ಬಿಲ್ಲೆ, ಸೇವಂತಿಗೆ, ಆನೆ, ನವಿಲು, ಕೇದಗಿ ಇತ್ಯಾದಿ. ಇಂಥದ್ದೇ ವಿನ್ಯಾಸಗಳನ್ನು ಕುರ್ತಿ, ಫ್ರಾಕ್‌ಗಳಲ್ಲೂ ಕಾಣಬಹುದು.





ಮಹಿಳೆಯರು ತಮ್ಮ ಅಭಿರುಚಿಗೆ ಅನುಸಾರವಾಗಿ ಬದಲಾವಣೆಗಳನ್ನೂ ಬಯಸುತ್ತಿದ್ದಾರೆ. ಹೊಸ ಟ್ರೆಂಡಿಂಗ್ ಎಂದರೆ ಈ ಖಣದ ಜ್ಯುವೆಲರಿಗಳು. ಈ ಖಣದ ಬಟ್ಟೆಗಳು ಹಾಗೂ ಬಾರ್ಡರ್‌ಗಳನ್ನು ಬಳಸಿ ನೆಕ್ಲೇಸ್, ಕಿವಿಯೋಲೆ, ಬಳೆಗಳನ್ನು ತಯಾರಿಸಲಾಗುತ್ತಿದೆ. ಇತ್ತೀಚೆಗೆ ಮೆಹಂದಿ ಕಾರ್ಯಕ್ರಮ, ಬಳೆ ಶಾಸ್ತ್ರ, ಸೀಮಂತ, ಮುಂಜಿ, ಮದುವೆ ಕಾರ್ಯಕ್ರಮಗಳು... ಹೀಗೆ ಎಲ್ಲಿ ನೋಡಿದರೂ ಈ ತರಹದ ಸೆಟ್‌ಗಳನ್ನು ಧರಿಸಿದ ಮಹಿಳೆಯರೇ ಮೆರೆಯುತ್ತಿದ್ದಾರೆ. ಸಾಂಪ್ರದಾಯಿಕ ಇಳಕಲ್ (ಕಾಟನ್ ಅಥವಾ ರೇಷ್ಮೆ) ಸೀರೆಗಳ ಜೊತೆ ಖಣದ ಬಟ್ಟೆಯಿಂದ ತಯಾರಿಸಲಾದ ವಿವಿಧ ವಿನ್ಯಾಸದ ತರಹೇವಾರಿ ಬ್ಲೌಸ್‌ಗಳು ಮತ್ತು ಈ ತರಹದ ಜುವೆಲ್ಲರಿ ಸೆಟ್‌ಗಳನ್ನು ನಾವಿಲ್ಲಿ ಕಾಣಬಹುದು.

### ಮನೆಯಲ್ಲೂ ಮಾಡಬಹುದು

ಖಣದ ಬಟ್ಟೆಯಿಂದ ತಯಾರಿಸಲಾದ ಜ್ಯುವೆಲ್ಲರಿಗಳನ್ನು ನಾವು ನಮ್ಮ ಅಭಿರುಚಿಗೆ ಅನುಗುಣವಾಗಿ ಮನೆಯಲ್ಲಿಯೇ ತಯಾರಿಸಬಹುದು. ಮಾರುಕಟ್ಟೆಯಲ್ಲಿ ಸಿಗುವ ಈ ಬಟ್ಟೆಗಳನ್ನು ತಂದು ಅದರಿಂದ ಟಾಪ್‌ಗಳು ಇಲ್ಲವೇ ಬ್ಲೌಸ್ ಹೊಲಿಸಿಕೊಂಡು ಮಿಕ್ಕಿದ ಬಟ್ಟೆಗಳಿಂದ ಮನೆಯಲ್ಲಿಯೇ ನೆಕ್ಲೇಸ್, ಕಿವಿಯೋಲೆ, ಬ್ಯಾಂಡ್, ಸರ ಮುಂತಾದವನ್ನು ತಯಾರಿಸಿಕೊಳ್ಳಬಹುದು. ದಪ್ಪನೆಯ ಪುಸ್ತಕದ ಕವರ್‌ಗಳನ್ನು ಅರ್ಧ ಚಂದ್ರಾಕಾರದಲ್ಲಿ ಕತ್ತರಿಸಿ ಅದರ ಮೇಲೆ ಫ್ಯಾಬ್ರಿಕ್ ಗ್ಲೂ ಹಾಕಿ ಅದೇ ಆಕೃತಿಯಲ್ಲಿ ಕತ್ತರಿಸಿದ ಖಣದ ಬಟ್ಟೆಯನ್ನು ಎರಡೂ ಬದಿಗೆ ಅಂಟಿಸಿ, ಎರಡೂ ತುದಿಯಲ್ಲಿ ನಿಮಗೆ ಬೇಕಾದ ಅಳತೆಯಲ್ಲಿ ದಪ್ಪನೆಯ ದಾರವನ್ನು ಕಟ್ಟಿ ಕತ್ತಿಗೆ ಕಟ್ಟಿಕೊಳ್ಳಬಹುದು. ಇದರ ಜೊತೆಗೆ ಚೌಕಾಕಾರ, ಆಯತಾಕಾರ, ದುಂಡನೆಯ, ಸ್ಟಾರ್ ಹೀಗೆ ವಿವಿಧ ವಿನ್ಯಾಸದ ದಪ್ಪ ಕವರ್‌ಗಳನ್ನು ಕತ್ತರಿಸಿ, ಅದೇ ಆಕಾರದಲ್ಲಿ ಬಟ್ಟೆಯ ಬಾರ್ಡರ್ ಕತ್ತರಿಸಿ ಗ್ಲೂ ಹಾಕಿ ಎರಡೂ ಬದಿ ಅಂಟಿಸಿ, ಮೇಲ್ಭಾಗದಲ್ಲಿ ಮಾರುಕಟ್ಟೆಯಲ್ಲಿ ಸಿಗುವ ಹುಕ್‌ಗಳನ್ನು ಅಳವಡಿಸಿ ಕಿವಿಗೇರಿಸಬಹುದು. ಇದರ ಮೇಲೆ ಬೆಳ್ಳಿ, ಚಿನ್ನ, ಮರ, ಪ್ಲಾಸ್ಟಿಕ್... ಹೀಗೆ ಸಾಕಷ್ಟು ವಿಧದ ಬೀಡ್ಸ್‌ಗಳನ್ನು ಅಲಂಕಾರಕ್ಕೆ ಬಳಸಬಹುದು.

ಈ ರೀತಿಯ ಜುವೆಲ್ಲರಿಗಳಲ್ಲಿ ಇದೀಗ ಮಾಂಗಲ್ಯಸರ ಅತ್ಯಂತ ಟ್ರೆಂಡಿಯಾಗಿದೆ. ಉದ್ದನೆಯ ಮೂರು ಅಥವಾ ನಾಲ್ಕು ಎಳೆಯ ಕರಿಮಣಿ ಸರದ ಜೊತೆಗೆ ಈ ಬಟ್ಟೆಯ ಬಾರ್ಡರ್‌ನಿಂದ ತಯಾರಿಸಲಾದ ಪೆಂಡೆಂಟ್ ಅತ್ಯಂತ ಆಕರ್ಷಕವಾಗಿದ್ದು. ಮಹಿಳೆಯರು ತಾವು ಹೋಗುವ ಸಭೆ, ಸಮಾರಂಭಕ್ಕೆ ಈ ಮಾಂಗಲ್ಯಸರ ಧರಿಸುತ್ತಿದ್ದಾರೆ. ಜೊತೆಗೆ ಇದೇ ಕರಿಮಣಿ ಮುತ್ತುಗಳನ್ನು ಅಳವಡಿಸಿದ ಕಿವಿಯೋಲೆ ಕೂಡ ಸಖತ್ತಾಗಿ ಕಾಣುತ್ತದೆ. ಮಹಿಳೆಯರು ಧರಿಸುವ ಫ್ಯಾಷನ್ ಆಕ್ಸೆಸರೀಸ್‌ಗಳಲ್ಲಿ ಈ ಸರ ಇದೀಗ ಸಾಕಷ್ಟು ಸದ್ದು ಮಾಡುತ್ತಿದೆ.

ಈ ಫ್ಯಾಬ್ರಿಕ್‌ನಿಂದ ವಿವಿಧ ವಿನ್ಯಾಸದ ಪರ್ಸ್‌ಗಳೂ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಮೊಬೈಲ್ ಇಡುವ ಪರ್ಸ್‌ಗಳಿಂದ ಹಿಡಿದು ಶಾಪಿಂಗ್‌ಗೆ ಹೋಗುವಾಗ ಕೊಂಡೊಯ್ಯುವ ಬ್ಯಾಗ್‌ಗಳವರೆಗೆ ವಿವಿಧ ವಿನ್ಯಾಸದ ಬ್ಯಾಗ್‌ಗಳನ್ನೂ ಕೂಡ ಇದೇ ಫ್ಯಾಬ್ರಿಕ್‌ನಿಂದ ತಯಾರಿಸಲಾಗುತ್ತಿದೆ. ಇದನ್ನು ನೀವು ಧರಿಸುವ ಉಡುಪಿಗೆ ಮ್ಯಾಚ್ ಮಾಡಿ ಕೊಂಡೊಯ್ಯಬಹುದು. ಇಳಕಲ್ ಸೀರೆಯ ಜೊತೆ ಈ ತರಹದ ಪೊಟ್ಲಿ ಬ್ಯಾಗ್‌ಗಳೂ ಕೂಡ ಇದೀಗ ಟ್ರೆಂಡ್ ಸೃಷ್ಟಿಸಿವೆ. ■